ಕರ್ನಾಟಕ ಸರ್ಕಾರ
ಕರ್ನಾಟಕ ರಾಜ್ಯ ಸಮಗ್ರ ಮಕ್ಕಳ ರಕ್ಷಣಾ ಸೊಸೈಟಿ
C/o. ನಿರ್ದೇಶನಾಲಯ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಒಂದನೇ ಮಹಡಿ, ಬಹು ಮಹಡಿಗಳ ಕಟ್ಟಡ, ಡಾ|| ಬಿ.ಆರ್. ಅಂಬೇಡ್ಕರ್ ವೀದಿ, ಬೆಂಗಳೂರು-೫೬೦ ೦೦೧,ಕರ್ನಾಟಕ
E-mail ID: icps.kar@gmail.com Ph.No.080-22879381/82

ಸಂಖ್ಯೆ:ಕೆಎಸ್‌ಐಸಿಪಿಎಸ್/ವಿಚಾರಣಾ/2017-18 ದಿನಾಂಕ:19-06-2017

ಗೆ,

ಉಪನಿರ್ದೇಶಕರು
ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ,
ಎಲ್ಲಾ ಜಿಲ್ಲೆಗಳು

ಮಾನ್ಯರೇ,

ವಿಷಯ: ವಿಚಾರಣಾಧೀನ ಮಹಿಳೆಯರ 6 ವರ್ಷದೊಳಗಿನ ಮಕ್ಕಳನ್ನು ಅವರ ಜೊತೆ ಇರಿಸಿಕೊಳ್ಳುವ ಹಾಗೂ 6 ವರ್ಷದ ಮೇಲಿನ ಮಕ್ಕಳನ್ನು ಸುಧಾರಣಾ ಸಂಸ್ಥೆಗಳಲ್ಲಿ ಇರಿಸುವ ಬಗ್ಗೆ.

ಉಲ್ಲೇಖ: ದಿನಾಂಕ:30.05.2017ರಂದು ಇಲಾಖಾ ಸಚಿವರ ಅಧ್ಯಕ್ಷತೆಯಲ್ಲಿ ನಡೆದ ಸಭೆ.

*****

ದಿನಾಂಕ:30.05.2017ರಂದು ಇಲಾಖಾ ಸಚಿವರ ಅಧ್ಯಕ್ಷತೆಯಲ್ಲಿ ನಡೆದ ಸಭೆಯಲ್ಲಿ ಚರ್ಚೆಗೆ ಬಂದ ಮೇರೆಗೆ ಕಳೆದ ಸಾಲಿನಲ್ಲಿ ವಿಚಾರಣಾಧೀನ ಮಹಿಳೆಯರ 6 ವರ್ಷದೊಳಗಿನ ಮಕ್ಕಳನ್ನು ಅವರ ಜೊತೆ ಇರಿಸಿಕೊಳ್ಳುವ ಹಾಗೂ 6 ವರ್ಷದ ಮೇಲಿನ ಮಕ್ಕಳನ್ನು ಸುಧಾರಣಾ ಸಂಸ್ಥೆಗಳಲ್ಲಿ ಇರಿಸುವ ಬಗ್ಗೆ ಅಫಿಡವಿಟ್‌ನ್ನು ಮಾನ್ಯ ಉಚ್ಚನ್ಯಾಯಾಲಯದಲ್ಲಿ ಸಲ್ಲಿಸಲಾಗಿದ್ದು ಈ ಬಗ್ಗೆ ಇತ್ತೀಚಿನ ವರದಿಯನ್ನು ಸಲ್ಲಿಸಲು ತಿಳಿಸಿರುತ್ತಾರೆ.

ಈಗಾಗಲೇ ಮಾನ್ಯ ಸರ್ವೋಚ್ಚ ನ್ಯಾಯಾಲಯದ WP(c)No.10955/2015 ಕ್ಕೆ ಸಂಬಂಧಿಸಿದಂತೆ ಕ್ರಮವಹಿಸುವ ಕುರಿತು ಉಚ್ಚನ್ಯಾಯಾಲಯದ ಆದೇಶ ದಿ:06.06.2016ರ ಮೇರೆಗೆ ಯಾವುದೇ ಪ್ರಕರಣಗಳಲ್ಲಿ ಮಹಿಳಾ/ಪುರುಷ ಆರೋಪಿ/ವಿಚಾರಣಾಧೀನ ಅಪರಾಧಿಗಳ 6 ವರ್ಷದ ಮೇಲ್ಪಟ್ಟ ಮಕ್ಕಳು, ಕಾರಾಗೃಹದಲ್ಲಿ ಇದ್ದಲ್ಲಿ ಕೈಗೊಳ್ಳಬೇಕಾಗಿರುವ ಕ್ರಮಗಳ ಬಗ್ಗೆ ಮಾಹಿತಿ ನೀಡಬೇಕಾಗಿರುತ್ತದೆ.

ಅದರಂತೆ ಕಾಲಕಾಲಕ್ಕೆ ಕಾರಾಗೃಹಗಳನ್ನು ಭೇಟಿ ಮಾಡಿ ಮಹಿಳಾ/ಪುರುಷ ಆರೋಪಿ/ವಿಚಾರಣಾಧೀನ ಅಪರಾಧಿಗಳ ಜೊತೆ, 6 ವರ್ಷದ ಮೇಲ್ಪಟ್ಟ ಮಕ್ಕಳಿದ್ದಲ್ಲಿ ಅಂತಹವರ ಮನೆ ಭೇಟಿ ಮಾಡಿ, ಆ ಮಕ್ಕಳ ವಿದ್ಯಾಭ್ಯಾಸ, ಪುನರ್ವಸತಿ ಹಾಗೂ ಅಗತ್ಯವಿದ್ದಲ್ಲಿ ಅಗತ್ಯ ನೆರವು ನೀಡುವ ನಿಟ್ಟಿನಲ್ಲಿ ಕ್ರಮವಹಿಸಲು ಈ ಕಛೇರಿ ಪತ್ರ ಸಂಖ್ಯೆ :ಕೆ.ಎಸ್.ಐ.ಸಿ.ಪಿ.ಎಸ್/ರಿ.ಅ-10955/2016 ದಿನಾಂಕ:26.12.2016 ತಿಳಿಸಲಾಗಿತ್ತು. ದಿ:30.05.2017ರಂದು ಮಾನ್ಯ ಸಚಿವರ ಅಧ್ಯಕ್ಷತೆಯಲ್ಲಿ ನಡೆದ ಸಭೆಯಲ್ಲಿ ಇತ್ತೀಚಿನ ವರದಿಯನ್ನು ಸಲ್ಲಿಸಲು ತಿಳಿಸಿದ್ದು ತಾವು ಇದರ ಬಗ್ಗೆ ಕ್ರಮ ಕೈಗೊಂಡು ವರದಿಯನ್ನು ಕರ್ನಾಟಕ ರಾಜ್ಯ ಸಮಗ್ರ ಮಕ್ಕಳ ರಕ್ಷಣಾ ಸೊಸೈಟಿಗೆ ಕಳುಹಿಸುವುದು.

ತಮ್ಮ ವಿಶ್ವಾಸಿ,

ಸದಸ್ಯ ಕಾರ್ಯದರ್ಶಿಗಳು,
ಕರ್ನಾಟಕ ರಾಜ್ಯ ಸಮಗ್ರ ಮಕ್ಕಳ ರಕ್ಷಣಾ ಸೊಸೈಟಿ ಬೆಂಗಳೂರು.

ಪ್ರತಿಯನ್ನು:
ಜಿಲ್ಲಾ ಮಕ್ಕಳ ರಕ್ಷಣಾಧಿಕಾರಿಗಳು ಜಿಲ್ಲಾ ಮಕ್ಕಳ ರಕ್ಷಣಾ ಘಟಕ ಎಲ್ಲಾ ಜಿಲ್ಲೆಗಳು.